ಬಿದ್ದೂ ನಗದ? ಅಂಗಿತ್ತು ನೋಡಿ ಅವ್ರ ಸಂಬಂಧ. ಆಗ ಇಂಗಿದ್ದೋರು ಈಗ ಮೂರೊತ್ತು ಉಣ್ತಾರೋ ಬಿಡ್ತಾರೋ ಜಗ್ಳ ಮಾಡ್ದೆ ಅಂತೂ ಇರಲ್ಲ ಅಂದ್ರೆ ನೀವು ನಂಬ್ತೀರಾ?

ಇವತ್ತಿನ ಜಗ್ಳ ಯಾಕಂತ ಕೇಳಿ. ಈ ಬಲ್ಗಡೆ ಮನೇವು ಇದಾವಲ್ಲ, ಯಾವಾಗ್ಲು ಕ್ಲೀನು-ಗೀನು ಅಂತ ತೊಳಿಯದು, ಬಳಿಯದು ಮಾಡ್ತಾನೇ ಇರ್ತಾವೆ. ಈ ಎಡ್ಗಡೆ ಮನೇವು ಗೇಯ್ಮೆ ಮಾಡಿರಾ, ಉಂಡ್ರಾ, ತಿಂದ್ರಾ ಅನ್ಕಂಡು ಇರ್ತಾವೆ. ನೆನ್ನೆ ಇಂಗೇ ತಿನ್ವಾಗ ಒಂದೆಲ್ಡು ಅಕ್ಕಿ ಮರಿಗೂಳು ಆರಾಡ್ಕಂಡು ಮನೆ ಮುಂದೆ ಬಂದಿದ್ವಂತೆ, ಆಗ ಈ ಎಡ್ಗಡೆ ಮನೆ ಮಕ್ಳು ಅವುಕ್ಕೇನೋ ನಾಕು ಕಾಳು ಆಕಿವಂತೆ. ಈಗ ಈ ಬಲ್ಗಡೆ ಮನೆ ಮೇಲೆ ಒಂದೆಲ್ಡು ಅಕ್ಕಿಗಳು ಪಿಕ್ಕೆ ಇಕ್ಕಿ ಬಿಟ್ವಂತೆ. ಅದ್ಕೆ ಈ ಬಲ್ಗಡೆ ಮನೆ ವಾದ ಏನಪ್ಪ ಅಂದ್ರೆ, ಈ ಅಕ್ಕಿಗಳು ಎಡ್ಗಡೆ ಮನೆ ಮಕ್ಳು ಆಕಿದ ಕಾಳ್ನ ತಿಂದು ಬಂದು ಬಲ್ಗಡೆ ಮನೆ ಮೇಲೆ ಪಿಕ್ಕೆ ಇಕ್ತಾವಂತೆ ನೋಡ್ರಪ್ಪ. ಆವತ್ತು ಉಚ್ಚೆ ಒಯ್ಕೊಂಡು ಆಡಿರೂ ಆಗ್ದಿರೋ ಜಗ್ಳ ಇವತ್ತು ಅಕ್ಕಿ ಪಿಕ್ಕೆ ಇಕ್ಕಿದ್ಕೆ ಆಗ್ತಿದೆ, ಏನ್ ಏಳ್ಳಿ ಇದ್ಕೆ?



ನಾನೂ ಯೋಚ್ನೆ ಮಾಡ್ತಿರ್ತೀನಿ ಅಂಗಿದ್ದೋರು ಇಂಗೆ ಎಂಗಾದ್ರು ಅಂತ. ಇವ್ರು ಮೊದ್ಲು ಜಗ್ಳ ಆಡಿದ್ಯಾವಾಗ ಅಂದ್ರೆ, ಆ ಕಡೆ ಈ ಕಡೆ ಇನ್ನೊಂದು ಹತ್ತು ಮನೆ ಆಗಿ ಊರು ಬೆಳೀತಾ ಬಂತು. ಈ ಬಲ್ಗಡೆ ಮನೇವು ಇದಾವಲ್ಲ ಇವ್ಕೆ ಸ್ವಲ್ಪ ತಲೆ ಜಾಸ್ತಿ ಅನ್ಸುತ್ತೆ. ಮೂರೊತ್ತು ಏನೇನೋ ಯೋಚ್ನೆ ಮಾಡ್ಕಂಡು ಎಡ್ಗಡೆ ಮನೇವ್ರಿಗೆ ತಿಂಡಿ-ತೀರ್ಥ ಆಸೆ ತೋರ್ಸಿಕಂಡು ಕೆಲ್ಸ ಮಾಡ್ಸರು. ಈ ಎಡ್ಗಡೆ ಮನೇವ್ರೋ ಜಟ್ಟಿಗಳು. ಏನು ಕೆಲ್ಸ ಆದ್ರೂ ಮಾಡಿ ಮುಗ್ಸವು. ಬಲ್ಗಡೆ ಮನೆ ಮದ್ವೆಗಳು ಜೋರು ನಡೆಯವು, ಈ ಎಡ್ಗಡೆ ಮನೇವ್ರೋ ಕುಶೀಲಿ ಕೆಲ್ಸ ಮಾಡ್ಕೊಂಡು ಮದ್ವೆ ಮಾಡವು. ಇಂಗೇ ಒಂದು ಮದ್ವೇಲಿ ಎಡ್ಗಡೆ ಮನೆ ಗಂಡು, ಬಲ್ಗಡೆ ಮನೆ ಎಣ್ಣು ನೋಡ್ಕೊಂಡು ಒಪ್ಕಂಡು ಬಿಟ್ವು ಇದು ಅಂಗೇ ಬೆಳೀತಾ ಓತು. ನಡ್ಲು ಮನೇನೆ ಇವ್ರು ಸೇರ್ತಿದ್ದ ಜಾಗ ಆಗಿತ್ತಲ್ಲ, ಅಂಗಾಗಿ ಆ ಮನೇಗೆ ಮೊದ್ಲು ಈ ವಿಷ್ಯ ಗೊತ್ತಾಗಿದ್ದು. ಅದೂ ಬುದ್ದಿ ಏಳ್ಕಂಡು ಏಳ್ಕಂಡೇ ಅವ್ರಿಗೆ ಸೇರಕೆ ಒಂದು ಜಾಗಾನೂ ಕೊಟ್ಬಿಡ್ತು. ಅವು ಆಗಾಗ ನನ್ನತ್ರ ಬರಾವು, ನನ್ನ ನೆರಳಲ್ಲಿ ನನ್ನೊರಗಿ ಕೂತು ಏನೇನೋ ಮಾತಾಡವು, ನಮ್ಮಿಬ್ರಿಂದ ಈ ಎಲ್ಡು ಮನೇನು ನೆಂಟ್ರಾಗ್ತಾವೆ ಅಂತೆಲ್ಲ. ಆಗೆಲ್ಲಾ ನಾನು, ನನ್ನ ಸುತ್ತ ಇದ್ದೋರು ಸೇರಿ ಎಂತಾ ಉಚ್ಚುಡುಗ್ರು ಅಂತಾ ಅದೇಟು ನಗ್ತಿದ್ವೋ. ಆಗ ನಮ್ಮ ಒಗ್ಗಟ್ಟು ಬಾರಿ ಇತ್ತು ಅನ್ನಿ. ಓ ನಿಮ್ಗೆ ನಾ ಯಾರಂತ ಗೊತ್ತಗ್ಲಿಲ್ವೇನೋ, ನಾನು ಅಸಿರೆಲೆ, ಕೆಂಪಣ್ಣು, ಮೈಯ್ತುಂಬಾ ನರ ನಾಡಿಗಳಂತೆ ಜೋತು ಬಿದ್ದಿರೋ ಬಿಳಲು, ನಾನು ನೀವು ಕರಿಯೋ ಮರ. ನನ್ಗೆ ಆಗ ಎಷ್ಟು ಗೆಳ್ತೀರು ಇದ್ರು ಗೊತ್ತಾ. ನನ್ನ ಒಂದಷ್ಟು ಗೆಳ್ತೀರನ್ನ ಕಡಿದಾಕೀನೇ ಈ ನಡ್ಲುಮನೆ ಉಟ್ಟಿದ್ದು. ಜೊತೆಗೆರಡು, ನಾಕು ಅಂತ ಒಂದು ಊರಾಗಿದ್ದು. ಎಲ್ಲೆಲ್ಲೋ ಇದ್ದೋರೆಲ್ಲಾ ಬಂದು ನನ್ನ ಗೆಳ್ತೀರಲ್ಲಿ ಒಬ್ಬೊಬ್ರುನ್ನೇ ತಗ್ದು ಅವ್ರ ಸಂಬಂಧ ಬೆಳ್ಸಿಕೊಂಡು, ಅಣ್ಣಂಗೊಂದು ತಮ್ಮಗೊಂದು ಅಂತ ಮನೆ ಕಟ್ಕಂಡ್ರು. ನನ್ಗಾಗ ಈ ಮನೆಗಳ್ನ ನೋಡೋಕೆ ಟೇಮೇ ಇರ್ತಿರ್ಲಿಲ್ಲ ಅನ್ನಿ. ಗಾಳಿ ಬೀಸ್ದೆ ಇದ್ರೂ ನಾವು ಕೈಯಾಡ್ಸಿದ್ರೆ ಸಾಕು ಅಕ್ಕಪಕ್ದೋರ ಕೈ ತಾಕದು. ಎಲೆಗೆ ಎಲೆ ತಾಕಿ, ಹೂಗೆ ಹೂ ಮುತ್ತಿಟ್ಟು ನಮ್ಮ ಮನ್ಸೂ ತೂಗಾಡದು. ಆಗೆಲ್ಲಾ ಈ ಮಕ್ಳು ಬಂದು ತಮ್ಮ ಸರಸದಾಟ ಆಡದ್ನೆಲ್ಲಾ ನೋಡಿ ನಾವು ಮುಕ ಮುಚ್ಕಂಡು, ಕಣ್ ಮಿಟ್ಕುಸ್ಕೊಂಡು ನಗ್ತಿದ್ವು. ಅವುಕ್ಕೋ ನಮ್ ಮಾತುಕತೆ ಏನೂ ಗೊತ್ತಾಗ್ತಿರ್ಲಿಲ್ಲ ಅಲ್ವಾ ಅಂಗಾಗಿ ಯಾರು ನೋಡ್ತಿಲ್ಲ, ಕೇಳ್ತಿಲ್ಲ ಅಂತ ಏನೇನೋ ಮಾತಾಡವು, ಮುದ್ದಾಡವು. ನಾವೆಲ್ಲಾ ಒತ್ತೊತ್ತಾಗಿ ಇದ್ವಲ್ಲ, ಆ ಮಕ್ಳು ಇಲ್ಲಿದಾವೆ ಅಂತಾನೇ ಆ ಮನೆ ಜನಕ್ಕೆ ಗೊತ್ತಾಗ್ತಿರ್ಲಿಲ್ಲ. ಈಗ್ನೋಡಿ, ನಾ ಒಬ್ಬೇ ಒಂಟಿ ದೆವ್ವದ ತರ ನಿಂತೀನಿ. ಕೇಳಾಕೂ, ಏಳಾಕೂ ನನ್ಮಾತು ಗೊತ್ತಿರೋರು ಯಾರೂ ಇಲ್ಲ. ಈಗ ಬೇರ್ಬೇರೆ ದೇಶದಿಂದೆಲ್ಲಾ ಬಂದಿರೋರು ಆ ಮನೆ ಮಡ್ಕೆ ಒಳಗೆಲ್ಲಾ ಪಾಪ ಕಳ್ರಂಗೆ ಕೂತವೆ. ಅವೇನು ಮಾತಾಡ್ತಾವೋ ಇಲ್ವೋ, ಅವುಕ್ಕೆ ಮಾತೀತೋ ಇಲ್ವೋ ನಂಗೂ ಗೊತ್ತಿಲ್ಲ. ನನ್ಮಾತು ಅವುಕ್ಕೂ ಗೊತ್ತಾಗಲ್ಲ. ನನ್ನ ಗೆಳ್ತೀರ್ನೆಲ್ಲಾ ಕಡುದ್ಮೇಲೆ ನನ್ಯಾಕೆ ಉಳ್ಸಿರು ಅಂತಿರಾ? ನಾನು ಅವರ್ಗೇನೋ ಬಾಳ ಬೇಕಾಗಿರೋ ಮರ ಅಂತೇ, ನನ್ಗೊಂದು ಕಟ್ಟೆ ಕಟ್ಟಿ ಪೂಜೆ ಮಾಡ್ತಾರೆ. ಮದ್ವೆ-ಮಕ್ಳು ಆಗ್ದಿರೋರು ಬಂದು ಸೂರ್ಯ ಉಟ್ಟೋ ಮುಂಚೆ ನನ್ನ ಅದೆಷ್ಟೋ